# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 261 |
| 2. ಸದಸ್ಯರ ಹೆಸರು | : | ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) |
| 3. ಉತ್ತರಿಸಬೇಕಾದ ದಿನಾಂಕ | : | 06.03.2025 |
| 4. ಉತ್ತರಿಸುವವರು | : | ಉಪ ಮುಖ್ಯಮಂತ್ರಿಗಳು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರದ ಟ್ರಾಫಿಕ್ ಜಾಮ್ ಕಡಿಮೆ ಮಾಡಲು ಹೊಸದಾಗಿ ನಿರ್ಮಾಣ ಮಾಡುವ ಎಲ್ಲಾ ಮೆಟ್ರೋ ಮಾರ್ಗದಲ್ಲಿ ಡಬಲ್-ಡೆಕ್ಕರ್ ಫ್ಲೈಓವರ್ ಮಾಡಲಾಗುತ್ತಿದೆಯೇ; | ಬೆಂಗಳೂರು ಮೆಟ್ರೋ ರೈಲು ಯೋಜನೆಯ ಹೊಸ ಎಲಿವೇಟೆಡ್ ಮಾರ್ಗಗಳ ನಿರ್ಮಾಣ ಹಂತದಲ್ಲಿ ಡಬಲ್ ಡೆಕ್ಕರ್ (ಮೆಟ್ರೋ ಕಮ್ ರೋಡ್) ಫ್ಲೈಓವರ್ ನಿರ್ಮಿಸುವ ಪ್ರಸ್ತಾವನೆಯು ಸರ್ಕಾರದಲ್ಲಿ ಪರಿಶೀಲನೆಯಲ್ಲಿರುತ್ತದೆ. |
| ಆ) | ಹಾಗಿದ್ದಲ್ಲಿ, ಯಾವ ಯಾವ ಮಾರ್ಗದಲ್ಲಿ ಇಂತಹ ಮಾರ್ಗವನ್ನು ನಿರ್ಮಾಣ ಮಾಡಲು ಯೋಜಿಸಲಾಗಿದೆ; (ವಿವರ ನೀಡುವುದು) ಇದೇ ಮಾದರಿಯನ್ನು ಉಪ ನಗರ ರೈಲು ಯೋಜನೆಯಲ್ಲೂ ಅಳವಡಿಸಿಕೊಳ್ಳಲಾಗುವುದೇ: (ಸಂಪೂರ್ಣ ಮಾಹಿತಿಯೊಂದಿಗೆ ವಿವರಣೆ ನೀಡುವುದು) | **ಬೆಂಗಳೂರು ಮೆಟ್ರೋ ರೈಲು ಯೋಜನೆ:** ಬೆಂಗಳೂರು ಮೆಟ್ರೋ ರೈಲು (ಕಿತ್ತಳೆ ಮಾರ್ಗ) ಹಂತ-3ರಲ್ಲಿ, ಎರಡು ಕಾರಿಡಾರ್‌ಗಳಲ್ಲಿ ಡಬಲ್ ಡೆಕ್ಕರ್ (ಮೆಟ್ರೋ ಕಮ್ ರೋಡ್) ನಿರ್ಮಾಣ ಮಾಡಲು ಯೋಜಿಸಿದ್ದು, ವಿವರಗಳು ಈ ಕೆಳಕಂಡಂತಿವೆ:<br>• **ಕಾರಿಡಾರ್-1:** ಜೆ.ಪಿ. ನಗರ 4ನೇ ಹಂತದಿಂದ ಹೆಬ್ಬಾಳದ ಹೊರವರ್ತುಲ ರಸ್ತೆ (ಓಆರ್‌ಆರ್) ಪಶ್ಚಿಮ ಮಾರ್ಗವಾಗಿ - 29.20 ಕಿಮೀ.ಗಳು.<br>• **ಕಾರಿಡಾರ್ -2:** ಹೊಸಹಳ್ಳಿಯಿಂದ ಕಡಬಗೆರೆಗೆ ಮಾಗಡಿ ರಸ್ತೆ ಮಾರ್ಗವಾಗಿ - 11.45 ಕಿ.ಮೀ.ಗಳು.<br>**ಬೆಂಗಳೂರು ಉಪ ನಗರ ರೈಲು ಯೋಜನೆ:** ಬೆಂಗಳೂರು ಉಪ ನಗರ ರೈಲು ಯೋಜನೆಯ ಯಶವಂತಪುರ ಮತ್ತು ಲೊಟ್ಟೆಗೊಲ್ಲಹಳ್ಳಿ ನಡುವಿನ Bengaluru Sub-Urban Rail Project (BSRP) ಕಾರಿಡಾರ್-2ಗೆ ಡಬಲ್ ಡೆಕ್ಕರ್ ಜೋಡಣೆಯ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ ; ಮತ್ತು ಚೌಡೇಶ್ವರಿ ಬಸ್ ನಿಲ್ದಾಣದಿಂದ BEL ರಸ್ತೆಯವರೆಗೆ ಡಬಲ್ ಡೆಕ್ಕರ್ ನಿರ್ಮಾಣವಾಗಲಿದೆ ಇದರಲ್ಲಿ ಲೆವೆಲ್-1 ರಲ್ಲಿ ಸಿಗ್ನಲ್ ಮುಕ್ತ ಎಲಿವೇಟೆಡ್ ರಸ್ತೆ ಮತ್ತು ಲೆವೆಲ್-2 ರಲ್ಲಿ BSRP ಹಳಿಗಳು ಸುಮಾರು 1.2 ಕಿ.ಮೀ ವ್ಯಾಪ್ತಿಯಲ್ಲಿರುತ್ತದೆ. |
| ಇ) | ಈ ಯೋಜನೆಯ ಕಾಮಗಾರಿಗಳಿಗೆ ಒಟ್ಟು ಎಷ್ಟು ಮೊತ್ತವನ್ನು ವಿನಿಯೋಗಿಸಲಾಗುವುದು? (ಮಾಹಿತಿ ಒದಗಿಸುವುದು) | ಬೆಂಗಳೂರು ಮೆಟ್ರೋ ರೈಲು (ಕಿತ್ತಳೆ ಮಾರ್ಗ) ಹಂತ-3ರಲ್ಲಿ ಬರುವ 2 ಕಾರಿಡಾರ್‌ಗಳಲ್ಲಿ ಡಬಲ್ ಡೆಕ್ಕರ್ (ಮೆಟ್ರೋ ಕಮ್ ರೋಡ್) ನಿರ್ಮಾಣ ಮಾಡುವ ಕಾಮಗಾರಿಗೆ ರೂ.8916.00 ಕೋಟಿಗಳ ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ.<br>ಬೆಂಗಳೂರು ಉಪ ನಗರ ರೈಲು ಯೋಜನೆಯ ಡಬಲ್ ಡೆಕ್ಕರ್ ಕಾಮಗಾರಿಗೆ ರೂ.150.00 ಕೋಟಿಗಳ ವೆಚ್ಚವಾಗಬಹುದೆಂದು ಅಂದಾಜಿಸಲಾಗಿದೆ. |

ಕಡತ ಸಂಖ್ಯೆ: ನಅಇ 44 ಪಿ.ಆರ್.ಜೆ 2025

(ಡಿ. ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ



e No. UDD/44/PRJ/2025-PMU-Urban Development Department (Computer No. 1701559)
nerated from eOffice by SUNEEL C, SU-UDD(SH), SUPERINTENDENT, URBAN DEVELOPMENT DEPARTMENT on 17/06/2025 03:54 PM